# IN THE COURT OF THE ADDL. SENIOR CIVIL JUDGE & JMFC., GUBBI

# OS -164/2019

Witness present and duly sworn on : 29-07-2026

Further Cross Examination: by Counsel for Plaintiff:

ಸರ್ವೆ ನಂ 5/8 ರಲ್ಲಿ 16 ಗುಂಟೆ ಮತ್ತು ಸ ರ್ವೆ ನಂ 5/2 ರಲ್ಲಿ 16 ಗುಂಟೆ ಜಮೀನುಗಳನ್ನು ನಾನು ನಾಗಭೂಷಣ್ ರವರಿಗೆ ಮಾರಾಟ ಮಾಡಿದ್ದೇನೆ ಎಂದರೆ ಸರಿ . ಸದರಿ ನಾಗಭೂಷಣ್ ಈ ದಾವೆಯ 12 ಪ್ರತಿವಾದಿ ಎಂದರೆ ಸರಿ . ದಾವಾ ಐಟಂ ನಂ 6 ಮತ್ತು 7 ಜಮೀನುಗಳನ್ನು ಮಾರಾಟ ಮಾಡುವ ಸಮಯದಲ್ಲಿ ವಾದಿ ಮತ್ತು ಇತರೆ ಹೆಣ್ಣುಮಕ್ಕಳ ಸಹಿ ಪಡೆದಿರಲಿಲ್ಲ ಎಂದರೆ ಸರಿ . 12 ನೇ ಪ್ರತಿವಾದಿಯು ಸದರಿ ಜಮೀನಿನಲ್ಲಿ 13 ನೇ ಪ್ರತಿವಾದಿಗೆ ಮಾರಾಟ ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ನನಗೆ ಕನ್ನಡ ಓದಲು ಬರುತ್ತದೆ. ಸಾಕ್ಷಿಗೆ ಈ ಸಮಯದಲ್ಲಿ ಸರ್ವೆ ನಂ 5/2 ರಲ್ಲಿ 16 ಗುಂಟೆ ಮತ್ತು ಸರ್ವೆ ನಂ 5/8 ರಲ್ಲಿ 16 ಗುಂಟೆ ಜಮೀನುಗಳನ್ನು 12 ಪ್ರತಿವಾದಿ ಯು 13 ನೇ ಪ್ರತಿವಾದಿಗೆ ಮಾರಾಟ ಮಾಡಿರುವ ಕ್ರಯ ಪತ್ರ ಎಂದರೆ ಸರಿ . ಸಾಕ್ಷಿಯು ಸದರಿ ಕ್ರಯ ಪತ್ರವನ್ನು ಒಪ್ಪಿರುವ ಕಾರಣ ದಿಃ 11-04-2022 ರ ದೃಢೀಕೃತ ನಕಲನ್ನು ನಿಪಿ 33 ಎಂದು ಗುರುತಿಸಲಾಯಿತು. ಸದರಿ ಜಮೀನುಗಳು ಒಟ್ಟು ಕುಟುಂಬದ ಆಸ್ತಿಗಳು ಎಂದರೆ ಸರಿ . ವಾದಿಗೆ ಮೋಸ ಮಾಡಲು ಕ್ರಯಪತ್ರಗಳನ್ನು ಸೃಷ್ಟಿಸಿದ್ದೇವೆ ಎಂದರೆ ಸರಿಯಲ್ಲ. ವಾದಿಗೆ ದಾವಾ ಆಸ್ನಿಗಳಲ್ಲಿ ಬಾಗಾಂಶ ಇದೆ ಎಂದರೆ ಜಮೀನು ಮಾರಾಟ ಮಾಡಿ ಅವರ ಮದುವೆ ಮಾಡಿದ್ದೇವೆ. ವಾದಿಯ ಮದುವೆಗೆ ಜಮೀನು ಮಾರಾಟ ಮಾಡಿಲ್ಲ ಆದರೆ ಸುಳ್ಳು ಹೇಳುತ್ತಿದೇನೆ ಎಂದರೆ ಸರಿಯಲ್ಲ. ವಾದಿಗೆ ದಾವಾ ಆಸ್ತಿಗಳಲ್ಲಿ ಬಾಗಾಂಶ ಬರಬೇಕೆಂದು ಸುಳ್ಳು ಸಾಕ್ಷಿ ಹೇಳುತ್ತಿದೇನೆ ಎಂದರೆ ಸರಿಯಲ್ಲ.

**Re examination - Nil**

(Typed to my dictation in open court)

R.O.I & A.C.

sd/-

Addl. Senior Civil Judge and
JMFC., Gubbi